aglasem.com

FOR KARNATAKA CLASS 10 PREPARATION

Karnataka SSLC Model Question Paper 2027 for Sociology (Paper 2, Kannada Medium) Key Answers

EXAM	YEAR	TYPE	SUBJECT
Karnataka Class 10	2027	Answer Key	Sociology

95-K

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560003

KARNATAKA SCHOOL EXAMINATION AND ASSESSMENT BOARD

6th Cross, Malleshwaram, Bengaluru – 560 003

ಮಾದರಿ ಉತ್ತರಗಳು

MODEL ANSWERS

2026–27 ರ ಎಸ್.ಎಸ್.ಎಲ್.ಸಿ. ಮಾದರಿ ಪ್ರಶ್ನೆಪತ್ರಿಕೆ – 2

S.S.L.C. MODEL QUESTION PAPER - 2 : 2026-27

ವಿಷಯ : ಸಮಾಜಶಾಸ್ತ್ರ

Subject : SOCIOLOGY

ವಿಷಯ ಸಂಕೇತ : 95-K | **Subject Code : 95-K**

ಸಮಯ : 3 ಗಂಟೆ 15 ನಿಮಿಷಗಳು] | [Time : 3 Hours 15 Minutes

ಗರಿಷ್ಠ ಅಂಕಗಳು : 100] | [Max. Marks : 100

I ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ **10X1=10**

1. ಆಧುನಿಕ ಯುಗದಲ್ಲಿ ಇದರಿಂದ ಉಂಟಾದ ಪರಿವರ್ತನೆಯು ಬಹಳ ಪರಿಣಾಮಕರಿಯಾಗಿದೆ

ಎ. ಶಿಕ್ಷಣ ಬಿ. ರಾಜಕೀಯ ಬದಲಾವಣೆ

ಸಿ. ಆರ್ಥಿಕ ಬದಲಾವಣೆ ಡಿ. ಮಾನವ ಸಂಬಂಧಗಳು

ಎ. ಶಿಕ್ಷಣ

2. ವಲಸೆ ಹೆಚ್ಚಳಕ್ಕೆ ಕಾರಣವಾದ ಅಂಶ

ಎ. ಲಿಂಗ ಅಸಮತೋಲನ ಬಿ. ಸಾಮಾಜಿಕ ಅಂತರ

ಸಿ. ಆರ್ಥಿಕ ಅಸಮತೋಲನ ಡಿ. ಪ್ರಾದೇಶಿಕ ಅಸಮತೋಲನ

ಡಿ. ಪ್ರಾದೇಶಿಕ ಅಸಮತೋಲನ

3. ಸಾಮಾಜಿಕ ಬದಲಾವಣೆಗೆ ಅಡ್ಡಿಯಾಗಿರುವುದು

ಎ. ಹವಾಗುಣ ಬಿ. ಮಳೆ ಸಿ. ಜಾತಿ ಡಿ. ವಾಯುಗುಣ

ಸಿ. ಜಾತಿ

4. 'ವೇದಗಳಿಗೆ ಹಿಂತಿರುಗಿ' ಎಂಬ ಘೋಷಣೆಯನ್ನು ನೀಡಿದವರು

ಎ. ರಾಜಾರಾಂ ಮೋಹನ್ ರಾಯ್ ಬಿ. ದಯಾನಂದ ಸರಸ್ವತಿ

ಸಿ. ಜೋತಿರಾವ್ ಪುಲೆ ಡಿ. ಆತ್ಮರಾಮ ಪಾಂಡುರಂಗ

ಬಿ. ದಯಾನಂದ ಸರಸ್ವತಿ

5. ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಬೆಂಬಲ ಸೂಚಿಸಿದ ಬ್ರಿಟೀಷ್ ಅದಿಕಾರಿ

ಎ. ಲಾರ್ಡಡಾಲ್ ಹೌಸಿ ಬಿ. ಲಾರ್ಡ ಮೌಂಟ್ ಬ್ಯಾಟನ್

ಸಿ. ಲಾರ್ಡ ಕಾರ್ನವಾಲೀಸ್ ಡಿ. ಲಾರ್ಡ ವೆಲ್ಲಸ್ಲಿ

ಎ. ಲಾರ್ಡಡಾಲ್ ಹೌಸಿ

6. ವಿಜ್ಞಾನ ತಂತ್ರಜ್ಞಾನದಿಂದ ಸಮಾಜದ ಮೇಲೆ ಉಂಟಾಗುವ ಪ್ರಭಾವ ಬೀರಿರುವುದು

ಎ. ಕೈಗಾರೀಕರಣ ಬಿ. ಸಾರಿಗೆ ಮತ್ತು ಸಂಪರ್ಕ

ಸಿ. ನಗರೀಕರಣ ಡಿ. ಅಧುನೀಕರಣ

ಡಿ. ಅಧುನೀಕರಣ

7. 1950ರ ಯೋಜನಾ ನೀತಿಯ ಮುಖ್ಯ ಗುರಿ

ಎ. ಸಾಂಪ್ರದಾಯಿಕ ಮನಸ್ಥಿತಿ ಕಡಿಮೆ ಮಾಡುವುದು

ಬಿ. ಪ್ರಾದೇಶಿಕ ಅಸಮತೋಲನ ಕಡಿಮೆ ಮಾಡುವುದು

ಸಿ. ಆರ್ಥಿಕ ಅಸಮತೋಲನ ಕಡಿಮೆ ಮಾಡುವುದು

ಡಿ. ಮೂಲ ಭೂತಸೌಕರ್ಯ ಕಡಿಮೆ ಮಾಡುವುದು

ಸಿ. ಆರ್ಥಿಕ ಅಸಮತೋಲನ ಕಡಿಮೆ ಮಾಡುವುದು

8. ಗುರುನಾನಕರು ಈ ಧರ್ಮವನ್ನು ಸ್ಥಾಪಿಸಿದರು

ಎ. ಜೈನ ಧರ್ಮ **ಬಿ.** ಸಿಖ್ ಧರ್ಮ **ಸಿ.** ಬೌದ್ಧ ಧರ್ಮ **ಡಿ.** ಹಿಂಧೂ ಧರ್ಮ

ಬಿ. ಸಿಖ್ ಧರ್ಮ

9. ಪ್ರಾರ್ಥನಾ ಸಮಾಜ ಸ್ಥಾಪನೆಯಾದ ವರ್ಷ

ಎ. 1857 **ಬಿ.** 1867 **ಸಿ.** 1865 **ಡಿ.** 1828

ಬಿ. 1867

10. 'ಮೂಕನಾಯಕ' ಪತ್ರಿಕೆಯನ್ನು ಪ್ರಕಟಿಸಿದವರು

ಎ. ಬಾಲಗಂಗಾಧರ ತಿಲಕ ಬಿ. ಡಾ॥ ಬಿ. ಆರ್. ಅಂಬೇಡ್ಕರ್

ಸಿ. ಮಹಾತ್ಮಗಾಂಧಿ ಡಿ. ರವೀಂದ್ರನಾಥ ಟಾಗೋರ್

ಬಿ. ಡಾ॥ ಬಿ. ಆರ್. ಅಂಬೇಡ್ಕರ್

II 'ಎ' ಪಟ್ಟಿಯನ್ನು 'ಬಿ' ಪಟ್ಟಿಯೊಂದಿಗೆ ಹೊಂದಿಸಿ ಉತ್ತರವನ್ನು ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ 5X1=5

1.	ಬ್ರಿಟಿಷ್ ಕಾಲದಲ್ಲಿ ಗುಲಾಮಗಿರಿಯನ್ನು ತೆಗೆದು ಹಾಕಿದವರು	– ಲಾಡ್ ಬ್ರೋಹನ್
2	ಧರ್ಮಜ್ಞಾನ ಪಡೆಯಲು ವೇದಗಳನ್ನು ಆಶ್ರಯಿಸಬೇಕು	– ದಯಾನಂದ ಸರಸ್ವತಿ
3	ಪರಮಹಂಸ ಸಭೆಯ ಮತ್ತೊಂದು ಹೆಸರು	– ಪ್ರಾರ್ಥನಾ ಸಮಾಜ
4	ಹಿಂದೂ–ಮುಸ್ಲಿಂ ಧರ್ಮದವರು ಒಂದಾಗಿರಬೇಕು	– ಕಬೀರ್
5	ಚೀನಾದ ಕ್ರಾಂತಿಕಾರಿ ನಾಯಕ	– ಮಾವೋ

III ಕೆಳಗಿನ ಪ್ರಶ್ನೆಗಳಿಗೆ ಒಂದು ಪದ ಅಥವಾ ಒಂದು ವಾಕ್ಯದಲ್ಲಿ ಉತ್ತರಿಸಿ 15X1=15

12. ಮೆಕೈವರ್ ಮತ್ತು ಪೇಜ್‌ರವರ ಪ್ರಕಾರ ಸಾಮಾಜಿಕ ಬದಲಾವಣೆಯನ್ನು ವ್ಯಾಖ್ಯಾನಿಸಿ?

ಉತ್ತರ : **"ಸಮಾಜಿಕ ಸಂಬಂಧಗಳಲ್ಲಾಗುವ ಪರಿವರ್ತನೆಯೇ ಸಾಮಾಜಿಕ ಬದಲಾವಣೆ"**

13. ಸಾಮಾಜಿಕ ಪರಿವರ್ತನೆಗೆ ಯಾವುದು ಅಡ್ಡಿಯಾಗಿದೆ ?

ಉತ್ತರ : ಅನಕ್ಷರತೆ ಮತ್ತು ಅಜ್ಞಾನ

14. ಹಿಂದೂ ಪುನರ್ ವಿವಾಹ ಕಾಯ್ದೆ ಜಾರಿಗೆ ಬಂದ ವರ್ಷ ಯಾವುದು ?

ಉತ್ತರ : 1856

15. ಕರ್ನಾಟಕದಲ್ಲಿ ಬ್ರಾಹ್ಮಣೇತರಿಗೆ ಮೀಸಲಾತಿಯನ್ನು ಪ್ರಾರಂಭಿಸಿದ ದೊರೆ ಯಾರು ?

ಉತ್ತರ : ನಾಲ್ವಡಿ ಕೃಷ್ಣರಾಜ ಒಡೆಯರು

16. ಮಹಾತ್ಮ ಗಾಂಧೀಜಿಯವರು ನೇತೃತ್ವ ವಹಿಸಿದ ಸತ್ಯಾಗ್ರಹಗಳು ಯಾವುವು ?

ಉತ್ತರ : ಚಂಪಾರಣ್ಯ ಮತ್ತು ಖೇಡಾ

17. ಭಾರತದ ನವೋದಯದ ಪಿತಾಮಹ ಎಂದು ಯಾರನ್ನು ಗುರುತಿಸಲಾಗಿದೆ?
ಉತ್ತರ : ರಾಜಾರಾಂ ಮೋಹನ್ ರಾಯ್
18. ಬೋಗಾರ್ಡಸ್‌ರವರ ಪ್ರಕಾರ ಬುಡಕಟ್ಟನ್ನು ವ್ಯಾಖ್ಯಾನಿಸಿ?
ಉತ್ತರ : ರಕ್ಷಣೆಯ ಅವಶ್ಯಕತೆ, ರಕ್ತ ಸಂಬಂಧ ಒಂದೇ ಧರ್ಮದ ನೆಲೆ ಇವುಗಳ ಆಧಾರದ ಮೇಲೆ ನಿಂತಿರುವ ಸಮೂಹವೇ ಬುಡಕಟ್ಟು ಸಮೂಹ
19. ಎರಡನೇಯ ಬುಡಕಟ್ಟು ಆಯೋಗವು ಯಾರ ಅಧ್ಯಕ್ಷತೆಯಲ್ಲಿ ರಚಿಸಿಲಾಯಿತು ?
ಉತ್ತರ : ದೀಲಿಪ್ ಸಿಂಗ್ ಡೋರಿ
20. ಯಾವ ವರ್ಷದ ನಂತರ ದೂರದರ್ಶನದಲ್ಲಿ ಜಾಹಿರಾತುಗಳನ್ನು ಪ್ರಕಟಿಸಲು ಅನುಮತಿ ನೀಡಲಾಯಿತು?
ಉತ್ತರ : 1975
21.ಸಾಮಾಜಿಕ ಬದಲಾವಣೆ ಎಂದರೇನು ?
ಉತ್ತರ : ಸಾಮಾಜಿಕ ಸಂಬಂಧಗಳಲ್ಲಿ ಕಂಡುಬರುವ ಪರಿವರ್ತನೆಯನ್ನು ಸಾಮಾಜಿಕ ಬದಲಾವಣೆ ಎನ್ನುವರು
22.ಕೈಗಾರಿಕರಣವನ್ನು ವ್ಯಾಖ್ಯಾನಿಸಿ ?
ಉತ್ತರ : ಸರಕು ಮತ್ತು ಸೇವೆಗಳ ಉತ್ಪಾದನೆಗೆ ದೈಹಿಕ ಶ್ರಮದ ಬದಲು ಯಂತ್ರಗಳನ್ನು ಬಳಸುವುದನ್ನೇ ಕೈಗಾರಿಕರಣ ಎನ್ನುವರು.
23. ಕುಟುಂಬ ಯೋಜನೆ ಕಾರ್ಯಕ್ರಮವನ್ನು ಏಕೆ ಪಾರ್ರಂಭಿಸಲಾಯಿತು ?
ಉತ್ತರ : ಭಾರತದಲ್ಲಿ ಜನಸಂಖ್ಯೆಯನ್ನು ನಿಯಂತ್ರಿಸಲು.
24. ವರದಕ್ಷಿಣೆ ನಿಷೇಧ ಕಾಯ್ದೆಯನ್ನು ಜಾರಿಗೆ ತರಲು ಕಾರಣವೇನು ?
ಉತ್ತರ : ಈ ಕಾಯ್ದೆಯಂತೆ ಸ್ತ್ರಿಯರ ಶೋಷಣೆಗೆ ಕಾರಣವಾದ ವರದಕ್ಷಿಣೆ ಕೊಡುವುದು ಮತ್ತು ತೆಗೆದು ಕೊಳ್ಳವುದನ್ನು ನಿಷೇದಿಸಲಾಗಿದೆ.
25. ರಾಷ್ಟ್ರೀಯ ಬುಡಕಟ್ಟು ಆಯೋಗ ಯಾವ ವರ್ಷದಲ್ಲಿ ರಚನೆಯಾಯಿತು ?
ಉತ್ತರ : ಆಗಸ್ಟ್ 2003
26. ಮುದ್ರಣ ಮಾದ್ಯಮಕ್ಕೆ ಎರಡು ಉದಾಹರಣೆ ಕೊಡಿ ?
ಉತ್ತರ ವೃತ್ತ ಪತ್ರಿಕೆ, ಪುರವಣಿಗಳು, ಪತ್ರಿಕೆ.

IV ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ : 14X2=28

27.ಸಾಮಾಜಿಕ ಬದಲಾವಣೆಯ ಪ್ರೇರಕಾಂಶಗಳಾವುವು ?
ಉತ್ತರ :
1.ಶಿಕ್ಷಣ
2. ವಿಜ್ಞಾನ ಮತ್ತು ತಂತ್ರಜ್ಞಾನ
3. ಕೈಗಾರಿಕೀಕರಣ
4. ಆದುನೀಕರಣ
28. ಜಾತಿ ಎಂಬ ಪದದ ಉಗಮವನ್ನು ತಿಳಿಸಿ ?
ಉತ್ತರ : ಜಾತಿ ಎನ್ನುವ ಪದವನ್ನು ಇಂಗ್ಲೀಷನಲ್ಲಿ ಕ್ಯಾಸ್ಟ್ ಎಂದು ಕರೆಯುತ್ತಾರೆ ಕ್ಯಾಸ್ಟ್ ಎನ್ನುವ ಪದವು ಪೋರ್ಚುಗೀಸ್ ಮತ್ತು ಸ್ಪ್ಯಾನಿಷ್ ಭಾಷೆಯ ಕ್ಯಾಸ್ಟ್ ಎಂಬ ಪದದಿಂದ ಬಂದಿದೆ. ಕ್ಯಾಸ್ಟ್ ಎಂಬುದು ಜನಾಂಗ ತಳಿ ಅನುವಂಶೀಯತೆ ಮುಂತಾದ ಅರ್ಥಕೊಡುತ್ತದೆ.
29. ಮಹಿಳೆಯರ ಆಸ್ತಿ ಹಾಗೂ ಉದ್ಯೋಗಕ್ಕೆ ಸಂಬಂಧಿಸಿದ ಕಾನೂನುಗಳನ್ನು ತಿಳಿಸಿ?
ಉತ್ತರ : ವಿವಾಹಿತ ಸ್ತ್ರಿಯರ ಆಸ್ತಿಯ ಕಾಯ್ದ –1874
ಹಿಂದೂ ಮಹಿಳೆಯರ ಆಸ್ತಿ ಹಕ್ಕಿನ ಶಾಸನ 1939
30. ಸ್ತ್ರೀಯರ ಸಮಾನತೆಗೆ ಹಿಂದೂ ವಿವಾಹ ಕಾಯ್ದೆಯು ಹೇಗೆ ಪೂರಕವಾಗಿದೆ ?
ಉತ್ತರ : ಈ ಶಾಸನವು ಬಹುಪತ್ನಿತ್ವ ಬಹುಪತಿತ್ವ ದ್ವಿಪತ್ನಿತ್ವ ಮತ್ತು ಬಾಲ್ಯ ವಿವಾಹ ಆಚರಣೆಯನ್ನು ನಿಷೇಧಿಸುವುದು ಹಾಗೂ ಸ್ತ್ರಿಯರಿಗೂ ವಿಚ್ಚೇದನದ ಹಾಗೂ ಪುನರ್ವಿವಾಹದ ಹಕ್ಕುಗಳನ್ನು ನೀಡುವುದು.
31. ಸಮೂಹ ಮಾದ್ಯಮದ ಎರಡು ಪ್ರಕಾರಗಳು ಯಾವುವು?
ಉತ್ತರ :
1. ಮುದ್ರಣ ಮಾಧ್ಯಮ
2. ವಿದ್ಯುನ್ಮಾನ ಮಾಧ್ಯಮ
32. ಸಾಮಾಜಿಕ ಬದಲಾವಣೆಗಿರುವ ಅಡ್ಡಿ ಆತಂಕಗಳನ್ನು ಹೆಸರಿಸಿ.
ಉತ್ತರ : 1. ಸಾಂಪ್ರದಾಯಿಕ ಮನಃಸ್ಥಿತಿ
2. ಅನಕ್ಷರತೆ

3. ಸಾಮಾಜಿಕ – ಆರ್ಥಿಕ ಅಸಮಾನತೆ
4. ಪ್ರಾದೇಶಿಕ ಅಸಮತೋಲನ

33. ಸಾಮಾಜಿಕ ಚಳುವಳಿಯ ಉದ್ದೇಶಗಳನ್ನು ಪಟ್ಟಿಮಾಡಿ
ಉತ್ತರ : 1. ಅಧಿಕಾರ ಬದಲಾವಣೆ
2. ಮೂಲ್ಯ ಬದಲಾವಣೆ
3. ವ್ಯಕ್ತಿಗತ ಭಾವನೆಗಳು ಹೇಳುವಿಕೆಗೆ ತರಬೇತಿ

34. ರಿವರ್ಸ್ ರವರ ಪ್ರಕಾರ ಬುಡಕಟ್ಟು (ಆದಿವಾಸಿ) ಜನಾಂಗದವರೆಂದರೆ ಯಾರು?
ಉತ್ತರ :ಸರಳ ಸಾಮಾಜಿಕ ಗುಂಪಿನಿಂದ ಕೂಡಿದ ಸಾಮಾನ್ಯ ಭಾಷೆಯನ್ನು ಮಾತನಾಡುವ ಯುದ್ಧದಲ್ಲಿ ಒಟ್ಟಿಗೆ ಕೆಲಸ ಮಾಡುವ ಮತ್ತು ಸಾಮಾನ್ಯ ಕೆಲಸಗಳಲ್ಲಿ ತೊಡಗುವ ಜನರಿಗೆ ಆದಿವಾಸಿ ಜನ ಎಂದು ಕರೆದಿದ್ದಾರೆ.

35. ಭಾರತದಲ್ಲಿ ಬುಡಕಟ್ಟು ಜನಾಂಗದವರನ್ನು ಕರೆಯುವ ವಿವಿಧ ಹೆಸರುಗಳಾವುವು?
ಉತ್ತರ : 1. ಅಲೆಮಾರಿ ಜನಾಂಗ 2. ಅನಾಗರೀಕರು 3. ಅರಣ್ಯವಾಸಿಗಳು
4. ಗಿರಿಜನರು 5. ಆದಿವಾಸಿಗಳು ಇತ್ಯಾದಿ

36. ಕಂಪ್ಯೂಟರ್ ಗಳನ್ನು ಎಲ್ಲಾ ರಂಗಗಳಲ್ಲಿ ಬಳಸಲಾಗುತ್ತದೆ. ಹೇಗೆ?
ಉತ್ತರ :ಆಡಳಿತದಲ್ಲಿ, ಶಾಲಾ–ಕಾಲೇಜುಗಳಲ್ಲಿ, ಬ್ಯಾಂಕುಗಳಲ್ಲಿ,ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಂಪೂರ್ಣವಾಗಿ ಇ–ಗೌರ್ನಸ್ ಅಥವಾ ಕಾಗದ ರಹಿತ ಆಡಳಿತವನ್ನು ಜಾರಿಗೆ ತಂದಿದೆ.

37. ವಿಜ್ಞಾನ ಮತ್ತು ತಂತ್ರಜ್ಞಾನವು ಮಾನವನ ಸಾಮಾಜಿಕ ಬದಲಾವಣೆಯಲ್ಲಿ ಹೇಗೆ ಮುಖ್ಯ ಪಾತ್ರವನ್ನು ವಹಿಸುತ್ತದೆ?
ಉತ್ತರ : 1. ಉದ್ದಿಮೆಗಳಲ್ಲಿ ಯಂತ್ರಗಳ ಬಳಕೆ
2. ಸಂಪರ್ಕ ಸಾಧನಗಳ ಬಳಕೆ
3. ಸಾರಿಗೆ ವ್ಯವಸ್ಥೆಯ ಬೆಳವಣಿಗೆ
4. ಕೃಷಿ ವಿಧಾನಗಳ ಸುಧಾರಣೆ

38. ಜಾತಿ ಪದ್ದತಿಯ ಯಾವ ಗುಣಲಕ್ಷಣಗಳನ್ನು ಹೊಂದಿರುತ್ತದೆ?
ಉತ್ತರ : ಯಾವ ಅಧಿಕಾರ ಆಸ್ತಿ ಅಂತಸ್ತು ಪ್ರತಿಷ್ಠಿಗಳಿಂದಲೊ ಜಾತಿಯನ್ನು ಬದಲಾಯಿಸಲು ಸಾಧ್ಯವಿಲ್ಲ. ಪ್ರತಿಯೊಂದು ಆಚರಣೆ ತನ್ನದೇ ಆಹಾರಕ್ರಮ ರೂಢಿ ಸಂಪ್ರದಾಯ ಆಚರಣೆ ಸಂಸ್ಕಾರಗಳನ್ನು ಒಳಗೊಂಡಿರುತ್ತದೆ. ಜಾತಿಯ ನಿಯಮಗಳನ್ನು ಮೀರುವಂತಿಲ್ಲ.

39. ಭಾರತದ ಸಮಾಜವನ್ನು ಸುಧಾರಿಸಲು ನಡೆದ ಮುಖ್ಯವಾದ ಸುಧಾರಣ ಚಳವಳಿಗಳನ್ನು ಹೆಸರಿಸಿ
ಉತ್ತರ : 1. ಬ್ರಹ್ಮ ಸಮಾಜ 2. ಕಬೀರ್ ಪಂಥ
3. ಆರ್ಯ ಸಮಾಜ 3. ಪ್ರಾರ್ಥನ ಸಮಾಜ
5. ಸತ್ಯಶೋಧಕ ಸಮಾಜ

40. ಬುಡಕಟ್ಟುಗಳ ಅಭಿವೃದ್ದಿಗೆ ಭಾರತ ಸರ್ಕಾರವು ಯಾವ ನೀತಿಗಳನ್ನು ರೂಪಿಸಿದೆ?
ಉತ್ತರ : 1. ರಕ್ಷಣಾತ್ಮಕ ನೀತಿ 2.ಅಭಿವೃದ್ಧಿ ನೀತಿ
3. ಮೀಸಲಾತಿ ನೀತಿ 4. ಸಲಹಾ ಸಮಿತಿ ರಚನೆ

V. ಕೆಳಗಿನ ಪ್ರಶ್ನೆಗಲಿಗೆ ಮೂರರಿಂದ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ:– 6X3=18

41. ಸಾಮಾಜಿಕ ಬದಲಾವಣೆ ತರುವಲ್ಲಿ ಶಿಕ್ಷಣದ ಪಾತ್ರವನ್ನು ತಿಳಿಸಿ
ಉತ್ತರ :
1. ಆಧುನಿಕ ಶಿಕ್ಷಣ ಬಂದು ಔದ್ಯೋಗಿಕ ಸಾಧನೆ
2. ಜನರ ದೃಷ್ಟಿಕೋನ ಬದಲಾವಣೆ
3. ಸ್ತ್ರೀಯರ ಸ್ಥಾನಮಾನ ಸುಧಾರಣೆ
4. ಸಾಮಾಜಿಕ ಹಾಗೂ ಆರ್ಥಿಕ ಪ್ರತಿಫಲ ಸಾಧನ
5. ಸಾಮಾಜಿಕ ಚಲನೆಗೆ ಸಹಾಯಕ
6. ದುರ್ಬಲ ವರ್ಗದ ಜಾಗೃತಿ
7. ನಗರೀಕರನ ಪ್ರಚೋದನೆ
8. ರಾಜಕೀಯ ಪ್ರಜ್ಞೆ

42. ಪ್ರಾದೇಶಿಕ ಅಸಮತೋಲನದ ಮೇಲೆ ಪ್ರಭಾವ ಬೀರುವ ಅಂಶಗಳಾವುವು?
ಉತ್ತರ :1. ಸಾರಿಗೆ ಮತ್ತು ಸಂಪರ್ಕ
2. ನೀರಾವರಿ ಸೌಲಭ್ಯ
3. ಕೈಗಾರೀಕರಣ
4. ನಗರೀಕರಣ

5. ನಗರ – ಗ್ರಾಮೀಣ ಪ್ರದೇಶಗಳ ಅಸಮಾನತೆ
6. ಜಾಗತೀಕರಣ

43. ಪಂಚವಾರ್ಷಿಕ ಯೋಜನೆಗಳಲ್ಲಿ ಬುಡಕಟ್ಟು ಜನಾಂಗದ ಬದಲಾವಣೆಯನ್ನು ವಿವರಿಸಿ ?
ಉತ್ತರ :

2ನೇ	ಪಂಚವಾರ್ಷಿಕ ಯೋಜನೆ – ವಿಶೇಷ ವಿವಿಧೋದ್ದೇಶ ಬುಡಕಟ್ಟು ಯೋಜನೆಯನ್ನು ಜಾರಿಗೆ ತರಲಾಯಿತು.
3ನೇ	ಪಂಚವಾರ್ಷಿಕ ಯೋಜನೆ – ಬ್ಲಾಕ್ ಪದ್ಧತಿ ಅನುಷ್ಠಾನಕ್ಕೆ ಬಂದಿತು.
4ನೇ	ಪಂಚವಾರ್ಷಿಕ ಯೋಜನೆ – ಶಾಸನಾತ್ಮಕ ಮತ್ತು ಕಾರ್ಯಾತ್ಮಕ ಅಂಶಗಳ ಮೂಲಕ ಬುಡಕಟ್ಟುಗಳ ರಕ್ಷಣೆ
5ನೇ	ಬುಡಕಟ್ಟು ಅಭಿವೃದ್ಧಿಯನ್ನು ಎರಡುಭಾಗಗಳಾಗಿ ವಂಗಡಿಸಿ ಉಪ ಯೋಜನೆಯನ್ನು ತಯಾರಿಸಲಾಯಿತು
6ನೇ	ಉಪಯೋಜನೆಯ ಕಡೆಗೆ ಪ್ರಾಮುಖ್ಯತೆ ನೀಡುವುದು
7ನೇ	ಅಭಿವೃದ್ಧಿಗಾಗಿ 73 ಪ್ರಾಚೀನ ಬುಡಕಟ್ಟುಗಳನ್ನು ಗುರುತಿಸಲಾಯಿತು
8ನೇ	ಹಣಕಾಸಿನ ನೆರವು ವಿಸ್ತರಿಸಿತು
9ನೇ	ಸರ್ಕಾರೇತರ ಸಂಸ್ಥೆಗಳೊಂದಿಗೆ ಸೇರಿ ಕೊಳ್ಳುವುದು
10ನೇ	ಆರ್ಥಿಕತೆಯನ್ನು ಹೊರಗಿನ ಮಾರುಕಟ್ಟೆ ಯೊಂದಿಗೆ ರಕ್ಷಿಸುವುದು

44. ಆಧುನಿಕ ಸ್ವತಂತ್ರ ಭಾರತದಲ್ಲಿ ಜಾತಿ ವ್ಯವಸ್ಥೆಯಲ್ಲಾದ ಪರಿವರ್ತನೆಯನ್ನು ಮಾಡಿದ ಅಂಶಗಳು ಯಾವುದು?
ಉತ್ತರ : ಕೈಗಾರೀಕರಣ
ನಗರೀಕರಣ
ಪಾಶ್ಚಾರೀಕರಣ
ಸಂಸೃತಾನುಕರಣೆ
ರಾಜ್ಯಗಳ ಪುನರ್ವಿಂಗಡಣೆ
ಶಿಕ್ಷಣ
ಹೊಸ ಸಂವಿಧಾನ
ಅಧುನಿಕ ನ್ಯಾಯಾಲಯ ಪದ್ಧತಿ
ವಲಸೆ
ಮಾರುಕಟ್ಟೆ ಅರ್ಥವ್ಯವಸ್ಥೆಯ ಬೆಳವಣಿಗೆ.

45. ಭಾರತದಲ್ಲಿ ಸಮೂಹ ಮಾದ್ಯಮವಾಗಿ ವೃತ್ತಪತ್ರಿಕೆಯ ಇತಿಹಾಸದ ಬಗ್ಗೆ ವಿವರಿಸಿ?
ಉತ್ತರ : 19ನೇ ಶತಮಾನದಲ್ಲಿ ಬ್ರಿಟಿಷ್ ಸರ್ಕಾರದ ಗೆಜೇಟಿರ್‌ಯಗಳು ಕಂಡುಬಂದವು. ಅಂದರೆ ಸರ್ಕಾರದ ಮಾಹಿತಿಯನ್ನು ಜನರಿಗೆ ತಿಳಿಸಲು ಇವುಗಳನ್ನು ಬಳಸಲಾಗುತ್ತಿತ್ತು. ಆ ನಂತರ ಸ್ವಾತಂತ್ರ್ಯ ಹೋರಾಟಗಾರರು, ಸಮಾಜ ಸುಧಾರಕರು, ಪತ್ರಿಕೆಗಳನ್ನು ಪ್ರಾರಂಭಿಸಿದರು. ಬಾಬಾ ಸಾಹೇಬ್ ಡಾ. ಬಿ.ಆರ್. ಅಂಬೇಡ್ಕರರು ಮೂಕನಾಯಕ, ಮಹಾತ್ಮ ಗಾಂಧೀಜಿಯವರು ಹರಿಜನ, ಬಾಲ ಗಂಗಾಧರ ತಿಲಕ್ ರವರು ಕೇಸರಿ ಹೀಗೆ ಅನೇಕ ಪತ್ರಿಕೆಗಳು ಪ್ರಕಟವಾದವು ಇದರಿಂದ ಅವುಗಳ ಜನಪ್ರಿಯತೆ ಜಾಸ್ತಿಯಾಯಿತು. ಈಗ ಭಾರತದಲ್ಲಿ ಸಾವಿರಾರು ದಿನ ಪತ್ರಿಕೆಗಳಿವೆ. ಜೊತೆಗೆ ವಾರ, ತಿಂಗಳು ಮತ್ತು ವಾರ್ಷಿಕ ಪತ್ರಿಕೆಗಳು ಪ್ರಕಟವಾಗುತ್ತಿವೆ.

46. ಬ್ರಿಟೀಷರ ಕಾಲದಲ್ಲಿ ಇದ್ದ ಮಹಿಳಾ ಸಘಟನೆಗಳು ಯಾವುವು?
ಉತ್ತರ :1) "ಆರ್ಯ ಮಹಿಳಾ ಸಮಾಜ" ಮತ್ತು "ಶಾರದ ಸದನ"
2) "ಭಾರತ ಮಹಿಳಾ ಪರಿಷತ್"
3) "ಭಾರತ ಸ್ತ್ರೀ ಮಹಾಮಂಡಲ"
4) "ಸ್ತ್ರೀಯರ ಭಾರತೀಯ ಸಂಘ"
5) "ಅಖಿಲ ಭಾರತೀಯ ಮಹಿಳಾ ಪರಿಷತ್"
(6) "ಕಸ್ತೂರಬಾ ಗಾಂಧೀ ರಾಷ್ಟ್ರೀಯ ಸ್ಮಾರಕ ಪ್ರತಿಷ್ಠಾನ"– ಇವು ಮುಖ್ಯವಾದುವು.

VI ಈ ಪ್ರಶ್ನೆಗೆ ನಾಲ್ಕುರಿಂದ ಎಂಟು ವಾಕ್ಯದಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ : **1X4=4**

47. ಮಹಿಳ ಹಿತದೃಷ್ಟಿಯಿಂದ ಕೈಗೊಳಲಾದ ಸಾಮಾಜಿಕ ಶಾಸನಗಳನ್ನು ಯಾವುವು?
ಉತ್ತರ : 1. ಹಿಂದೂ ವಿವಾಹ ಕಾಯ್ದೆ.
2. ಹಿಂದೂ ಉತ್ತರಾಧಿಕಾರ ಕಾಯ್ದೆ

3. ಹಿಂದೂ ದತ್ತು ಜೀವನಾಂಶ ಕಾಯ್ದೆ
4. ವಿಶೇಷ ವಿವಾಹ ಕಾಯ್ದೆ
5. ವರದಕ್ಷಿಣೆ ನಿಷೇಧ ಕಾಯ್ದೆ
6. ಕನ್ಯೆಯರ ಮತ್ತು ಮಹಿಳೆಯರ ಅನೈತಿಕ ವ್ಯವಹಾರ ಪ್ರತಿಬಂಧಕ ಕಾಯ್ದೆ
7. ವೈದ್ಯಕೀಯ ಗರ್ಭನಿವಾರಣಾ ಕಾಯ್ದೆ
8. ಅಪರಾಧ ಕಾನೂನು ತಿದ್ದುಪಡಿ ಕಾಯ್ದೆ
9. ಕುಟುಂಬ ನ್ಯಾಯಾಲಯ ಕಾಯ್ದೆ.